# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 329 |
| 02. ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. ಉತ್ತರಿಸುವ ದಿನಾಂಕ | : | 18.07.2024 |
| 04. ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯಲ್ಲಿ ಬೇರೆ ಇಲಾಖೆಗಳಂತೆಯೇ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ವಾರದ ಮತ್ತು ವಿಶೇಷ ರಜೆಗಳನ್ನು ನೀಡಲಾಗುತ್ತಿದೆಯೇ; ಇದ್ದಲ್ಲಿ, ಯಾರು ಯಾರಿಗೆ ಯಾವ ರೀತಿಯಲ್ಲಿ ರಜೆಗಳನ್ನು ನೀಡಲಾಗುತ್ತಿದೆ. | ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ನಿಯಮಾನುಸಾರ ಸಾಂದರ್ಭಿಕ ರಜೆ (ಸಿ.ಎಲ್), ಹಕ್ಕಿನಲ್ಲಿರುವ ಗಳಿಕೆ ರಜೆ/ಪರಿವರ್ತಿತ ರಜೆ ಹಾಗೂ ಕೆ.ಸಿ.ಎಸ್ ನಿಯಮಾವಳಿಯಡಿಯಲ್ಲಿ ನೀಡಲಾಗುವ ವಿಶೇಷ ಸಾಂದರ್ಭಿಕ ರಜೆಗಳನ್ನು ಮಂಜೂರು ಮಾಡಲಾಗುತ್ತಿದೆ.<br>ಅಲ್ಲದೆ, ಇಲಾಖೆಯ ಪಿ.ಸಿ ಮತ್ತು ಹೆಚ್.ಸಿ ವೃಂದದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆ ಅಥವಾ ವಾರದ ರಜಾ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ ಹಾಗೂ ಸಹಾಯಕ ಸಬ್-ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಡಿವೈ.ಎಸ್.ಪಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಪತ್ರಾಂಕಿತ ರಜಾ ಅನುಮತಿಯನ್ನು ನೀಡಲಾಗುತ್ತಿದೆ. |
| ಆ) | ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ದೈಹಿಕ ಮತ್ತು ಮಾನಸಿಕ ವಿಶ್ರಾಂತಿಗೆ ರಜೆಗಳು ಅವಶ್ಯವಾಗಿದ್ದು, ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ವಾರದ ರಜೆಯನ್ನು ನೀಡಲು ಇಲಾಖೆಯ ಕ್ರಮಗಳೇನು; (ಮಾಹಿತಿ ನೀಡುವುದು) | ಕ್ರಮ ಸಂಖ್ಯೆ (ಅ) ರಲ್ಲಿ ವಿವರಿಸಿರುವಂತೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ನಿಯಮಾನುಸಾರ ರಜೆಯನ್ನು ಮಂಜೂರು ಮಾಡಲಾಗುತ್ತಿದೆ. |
| ಇ) | ಪೊಲೀಸ್ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ನಿಗದಿಪಡಿಸಿದ ಕೆಲಸದ ಅವಧಿ ಎಷ್ಟು; ಈ ಕೆಲಸದ ಸಮಯವನ್ನು ತುರ್ತು ಸಂದರ್ಭಗಳನ್ನು ಹೊರತುಪಡಿಸಿ 8 ಗಂಟೆಗಳಿಗೆ ಸೀಮಿತಗೊಳಿಸಲು ಇಲಾಖೆಯ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಪೊಲೀಸ್ ಮ್ಯಾನ್ಯುಯಲ್‌ನ ಆದೇಶದನ್ವಯ ಸಿಬ್ಬಂದಿಗಳಿಗೆ 08 ಗಂಟೆಗಳ 03 ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗುತ್ತದೆ. ಠಾಣೆಗಳ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ನಿರ್ವಹಣೆ, ಬಂದೋಬಸ್ತ್ ಕರ್ತವ್ಯ ಇತ್ಯಾದಿ ಕರ್ತವ್ಯದ ಒತ್ತಡದ ಕೆಲವು ಸಂದರ್ಭಗಳಲ್ಲಿ ಆಯಾ ಠಾಣಾಧಿಕಾರಿಗಳು ಅವಶ್ಯಕತೆಗನು ಗುಣವಾಗಿ ಸಿಬ್ಬಂದಿಗಳನ್ನು ಸೀಮಿತ ಅವಧಿಗೆ 02 ಪಾಳಿಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸುತ್ತಾರೆ. |

**HD 146 PPS 2024**

(ಡಾ|| ಜಿ.ಪರಮೇಶ್ವರ)
ಗೃಹ ಸಚಿವರು